ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ23-09-2025 ರಂದು ಬೊಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎಸ್ ಎಚ್ ವಕೀಲರಿಂದಃ

1. ನನ್ನ ಮಾಲ್ಕಿ ಜಾಗದಲ್ಲಿ ವಿದ್ಯುತಚಕ್ತಿ ಕಂಬವನ್ನು ಅಳವಡಿಸಿದ್ದು ಅವುಗಳನ್ನು ತೆಗೆಯುವಂತೆ ನಾನು ಈ ದಾವೆ ಸಲ್ಲಿಸಿರುತ್ತೇನೆ. ದಾವಾಸ್ತಿಯಲ್ಲಿ ವಿದ್ಯುತಚಕ್ತಿ ಲೈನ್ ಕಂಬಗಳನ್ನು ಅಳವಡಿಸಿರುತ್ತಾರೆ. ನಿ.ಪಿ-4 ರ ಕಾಲಂ ನಂ 9 ರಲ್ಲಿ ನಮೂದಿಸಿದ ಪಾರ್ವತಿ ಬಿನ್ ಭಾಸ್ಕರ ನಾಯ್ಕ ನಮ್ಮ ಕುಟುಬಂದವರು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಪಾವ್ರತಿ ಬಿನ್ ಭಾಸ್ಕರ ನಾಯ್ಕ ರವರು ನನ್ನ ಚಿಕ್ಕಮ್ಮ ಆಗಬೇಕು ಎಂದು ನುಡಿಯುತ್ತಾರೆ.

2. ನಿ.ಪಿ-4 ರ ಕಾಲಂ ನಂ 9 ರಲ್ಲಿ ನಮೂದಿಸಿದ ಮಾದೇವಿ ಕೊಂ ಗಣಪತಿ ನಾಯ್ಕ ನನ್ನ ತಾಯಿ ಮೊಹಿನಿ ರಾಜು ನಾಯ್ಕ ನನ್ನ ಅಣ್ಣ, ಚಂದ್ರಶೇಖರ ಗಣಪತಿ ನಾಯ್ಕ ರವರು ಮತ್ತು ನಾನು ಒಂದೇ ಕುಟುಂಬದವರು ಎಂದರೆ ಸರಿ. ಸದರಿ ಆಸ್ತಿಯಲ್ಲಿ ಸದರಿ ಪಾರ್ವತಿ ಬಿನ್ ಭಾಸ್ಕರ ನಾಯ್ಕರವರಿಗೂ ಸಹ ಹಕ್ಕು ಅಧಿಕಾರ ಇರುತ್ತದೆ ಎಂದರೆ ಸರಿ. ಸದರಿ ನಮ್ಮ ಕುಟುಂಬದ ಜಮೀನು ಹಾಗೂ ಸದರಿ ಪಾರ್ವತಿ ಬಿನ್ ಭಾಸ್ಕರ ನಾಯ್ಕರವರ ಜಮೀನುಗಳು ಪೋಡಿ ಆಗಿ ಪ್ರತ್ಯೇಕ ಆಗಿರುವುದಿಲ್ಲ ಎಂದರೆ ಸರಿ.

3. ದಾವಾಸ್ತಿಯಲ್ಲಿ ಕೆ ಇ ಬಿ ರವರು ವಿದ್ಯುತ್ ಕಂಬಗಳನ್ನು ಅಳವಡಿಸಿ ವಿದ್ಯುತ್ ಲೈನ್ ಗಳನ್ನು ಅಳವಡಿಸಿರುತ್ತಾರೆ ಸದರಿ ವಿದ್ಯುತ್ ಕಂಬಗಳನ್ನು ಹಾಗೂ ಸದರಿ ವಿದ್ಯುಸ್ ಲೈನ್ ಗಳನ್ನು ಕೆ ಇ ಬಿ ರವರು ತೆಗೆದುಹಾಗಬೇಕು ಎಂದು ಈ ದಾವೆ ಸಲ್ಲಿಸಿರುತ್ತೇನೆ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಸದರಿ ಕೆ ಇ ಬಿ ರವರಿಗೆ ನೋಟೀಸ ನೀಡಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

4. ಪ್ರತಿವಾದಿಗಳಿಗೆ ಕ್ಯಾದಗಿ ಗ್ರಾಮ ಸರ್ವೆ ನಂ 130, 131, 132 ರಲ್ಲಿ ಹಕ್ಕು ಅಧಿಕಾರ ಇರುತ್ತದೆ ಎಂದರೆ ಸರಿ. ಪ್ರತಿವಾದಿಗಳು ತಮ್ಮ ಜಮೀನಿನಲ್ಲಿ ನಿರಾವರಿಗೊಸ್ಕರ ಪಂಪಸೆಟ್ ನ್ನು 2014 ರಲ್ಲಿ ಅಳವಡಿಸಿಕೊಂಡಿರುತ್ತಾರೆ ಎಂದರೆ ಸರಿ. 2014 ರಲ್ಲಿ ಸದರಿ ಪಂಪಸೆಟ್ ಗೆ ಸಂಬಂದಿಸಿದಂತೆ ಪ್ರತಿವಾದಿಯರು ತೆಗೆದುಕೊಳ್ಳುವಾಗ ಸದರಿ ವಿದ್ಯುತ್ ಲೈನ್ ಸ್ವಲ್ಪ ಜಂಗಲ್ ನಲ್ಲಿ ಹೋಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಮಾಲ್ಕಿ ಜಮೀನಿನಲ್ಲಿಯೂ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಜಂಗಲ್ ನಲ್ಲಿ ವಿದ್ಯುತ್ ಲೈನ್ ಹೋದರೆ ಮಳೆಗಾಲದಲ್ಲಿ ವಿದ್ಯುತ್



ಸಂಪರ್ಕದಲ್ಲಿ ವ್ಯತ್ಯಾಸ ಆಗುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಾಸ ಆಗುತತದೆ ಎನ್ನುವ ಕಾರಣಕ್ಕೆ ಸದರಿ ವಿದ್ಯುತ್ ಲೈನ್ ನ್ನು ಸ್ಥಳಾಂತರಿಸುವಂತೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ

ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆನಂತರ ಕೆ ಇ ಬಿ ರವರು ಸದರಿ ವಿದ್ಯುತ್ ಲೈನನ್ನು ಸ್ಥಳಾಂತರಿಸಿರುತ್ತಾರೆ ಎಂದರೆ ಸರಿ. ಸದರಿ ವಿದ್ಯುತ್ ಲೈನ್ ಪಾರ್ವತಿ ಬಿನ್ ಭಾಸ್ಕರ ನಾಯ್ಕರವರ ವೈವಾಟಿಯಲ್ಲಿರುವ ಜಮೀನಿನಲ್ಲಿ ಸದರಿ ವಿದ್ಯುತ್ ಕಂಬಗಳು ಮತ್ತು ವಿದ್ಯುತ್ ಲೈನ್ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾಸ್ತಿ ಖುಷ್ಕಿ ಜಮೀನು ಎಂದರೆ ಸರಿಯಲ್ಲ.

5. ಸಾಮಾನ್ಯವಾಗಿ ವಿದ್ಯುತ್ ಇಲಾಖೆಯವರು ವಿದ್ಯುತ್ ಲೈನ್ ಗಳನ್ನು ಮತ್ತು ಕಂಬಗಳನ್ನು ಖಾಸಗಿ ಜಾಗದಲ್ಲಿ ಅಳವಡಿಸುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ವಿದ್ಯುತ್ ಇಲಾಖೆಯವರು ವಿದ್ಯುತ್ ಲೈನ್ ಗಳನ್ನು ಮತ್ತು ಕಂಬಗಳನ್ನು ಖಾಸಗಿ ಜಮೀನಿನಲ್ಲಿ ಅಳವಡಿಸುವ ಅಧಿಕಾರ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರಿಂದ ನನಗೆ ತೊಂದರೆ ಆಗುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

6. ದಾವಾಸ್ತಿ ತರಿ ಜಮೀನು ಆಗಿದ್ದರಿಂದ ಸದರಿ ವಿದ್ಯುತ್ ಲೈನ್ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಜಮೀನಿನಲ್ಲಿ 5HP ಪಂಪಸೆಟ್ ನ್ನು ಅಳವಡಿಸಿಕೊಂಡು ತನ್ನ ಜಮೀನನ್ನು ಚೆನ್ನಾಗಿ ಅಬಿವೃದ್ಧಿ ಪಡಿಸಿದ್ದರಿಂದ ಅವರಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

7. ದಿಃ 07-05-2019 ರಂದು ಈ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

8. ನನ್ನ ದಾವೆಯಲ್ಲಿ ಕೇಳಿದಂತೆ ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**